# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 1063/2016 ಸಿಡಬ್ಲೂ : 1 ಪಿಡಬ್ಲೂಃ 3

ಪ್ರಮಾಣವಚನ ಬೋಧಿಸಲಾಯಿತು ದಿಃ 23-07-2025

ಹೆಸರು : ಲಿಂಗಣ್ಣ

ತಂದೆ ಹೆಸರು : ಶಿವಣ್ಣ

ವಯಸ್ಸು : 64 ವರ್ಷ

ಉದ್ಯೋಗ : ನಿವೃತ್ತ ಎ ಎಸ್ ಐ

ವಾಸಸ್ಥಳ : ಕಲಬುರಗಿ

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು ಸನ್ 2015 ರಿಂದ 2018 ವರೆಗೆ ಸೇಡಂ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ಹೀಗಿರುವಾಗ ನಾನು ದಿಃ 17-02-2016 ರಂದು ನಾನು ಬೆಳಿಗ್ಗೆ ಠಾಣೆಯಲ್ಲಿ ಹಾಜರಿದ್ದಾಗ ನನಗೆ ಚಾ ಸಾ 4 ಮತ್ತು 5 ರವರಿಗೆ ಗಸ್ತು ಕರ್ತವ್ಯಕ್ಕೆ ಬಜಾರ ಏರಿಯಾದಲ್ಲಿ ನೇಮಿಸಿರುತ್ತಾರೆ. ಆಗ ಸುಮಾರು 12-45 ಗಂಟೆಗೆ ಬಸವನಗರದಲ್ಲಿ ಅನಧಿಕೃತವಾಗಿ ಸೇಂದಿ ಮಾರಾಟ ಮಾರುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು. ಆಗ ನಾನು ಮತ್ತು ಪಂಚರಾದ ಚಾ ಸಾ 2 ಮತ್ತು 3 ರವರು ಹಾಗೂ ಸಿಬ್ಬಂದಿಯೊಂದಿಗೆ ಬಸವನಗರದ ಕಡೆಗೆ ಮೊಟಾರು ಸೈಕಲ್ ಮೇಲೆ ಹೋಗಿದ್ದು. ಹಾಜಿ ಅಲಿ ದರ್ಗದ ಹತ್ತಿರ ನಿಂತು ನೋಡಲಾಗಿ ಒಬ್ಬ ವ್ಯಕ್ತಿ ಸೇಂದಿ ಪಾಕೇಟನ್ನು ಕೈಯಲ್ಲಿ ಹಿಡಿದು ರೂ.5/- ಒಂದು ಪಾಕೇಟು ಅಂತಾ ಸೇಂದಿ ಮಾರಾಟ ಮಾರುತ್ತಿದ್ದನು. ಆಗ ನಾವು ಒಂದು ಗಂಟೆ ಸುಮಾರಿಗೆ ಆರೋಪಿಗೆ ಪರವಾನಗಿ ಬಗ್ಗೆ ವಿಚಾರಿಸಿದಾಗ ಆರೋಪಿತನು ಯಾವುದೇ ಸಮರ್ಪಕವಾಗಿ ಉತ್ತರನೀಡಿಲ್ಲ. ನಂತರ ಆತನ ಹೆಸರನ್ನು ಕೇಳಲಾಗಿ ಆರೋಪಿತನು ಆತನ ಹೆಸರು ರಾಮ ತಂದೆ ಕಿಶನ್ ಜಾದವ್ ಅಂತಾ ತಿಳಿಸಿರುತ್ತಾರೆ. ನಂತರ ಸೆಂದಿ ಮಾರಾಟ ಮಾಡುತ್ತಿದ್ದ ಒಂದದು ವೈರಿನ ಬ್ಯಾಗನ್ನು ಬಿಚ್ಚಿ ನೋಡಲಾಗಿ ಒಟ್ಟು 30 ಪಾಕೇಟು ಸೆಂದಿ ಇತ್ತು. ಸದರಿ ಸೇಂದಿ ಪಾಕೇಟುಗಳು ಹಾಗು ಆರೋಪಿಗೆ ನಮ್ಮ ತಾಬೆಗೆ ತೆಗೆದುಕೊಂಡು ಠಾಣೆಗೆ ತಂದು ಅದರಲ್ಲಿರುವ ಒಂದು ಸೇಂದಿ ಪಾಕೇಟನ್ನು ಗಾಜಿನ ಬಾಟಲಿಯಲ್ಲಿ ಎಸಿ ಡಿ ಎಂ ಮುಂದ್ರೆಯಿಂದ ಸೀಲು ಮಾಡಿದೇವು. ನಂತರ ಮು ಮಾ ಹಾಗೂ ಆರೋಪಿತರಿಗೆ ಮುಂದಿನ ಕ್ರಮಕ್ಕಾಗಿ ಚಾ ಸಾ 7 ರವರಿಗೆ ಒಪ್ಪಿಸಿಕೊಟ್ಟಿರುತ್ತೇನೆ. ಸಾಕ್ಷಿಗೆ ಒಂದು ಬಾಟಲಿಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ಈಗಾಗಲೆ ಮು ಮಾ 1 ಎಂದು ಗುರುತಿಸಲಾಗಿದೆ . ಅದೇ ರೀತಿ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತನು ಆ

ದಿನ ಸೇಂದಿ ಮಾರಾಟ ಮಾಡುತ್ತಿದ್ದನು ಎಂದು ನುಡಿಯುತ್ತಾರೆ. ಸಾಕ್ಷಿಯು ಜಪ್ತಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೆ ನಿ ಪಿ 1 ಎಂದು ಗುರುತಿಸಲಾಗಿದೆ ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 1(ಸಿ) ಎಂದು ಗುರುತಿಸಲಾಯಿತು. ಅದೇ ರೀತಿ ದೂರನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ನಿ ಪಿ 2 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಆರ್ ಎಂ ವಕೀಲರಿಂದ ಃ

ಚಾ ಸಾ 2 ಮತ್ತು 3 ರವರು ಸಾಕಷ್ಟು ಪ್ರಕರಣಗಳಲ್ಲಿ ಪಂಚರಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿದಾಗ ಸಮಯ 12-45 ಗಂಟೆಯಾಗಿತ್ತು. ನಾವು ಮರೆಯಲ್ಲಿ ನಿಂತು ಸುಮಾರು 10 ನಿಮಿಷಗಳ ಕಾಲ ನೋಡಿದೆವು. ಆಗ ಆರೋಪಿತನು ಕೈಯಲ್ಲಿ ಸೇಂದಿ ಪಾಕೇಟನ್ನು ಹಿಡಿದು ಮಾರಾಟ ಮಾರುತ್ತಿದ್ದನು ಆದರೆ ಯಾರು ಗ್ರಾಹಕರು ಇರಲಿಲ್ಲ. ನಾನು ಒಂದು ಪಾಕೇಟು ಸೇಂದಿಯನ್ನು ಪೋಲೀಸ್ ಠಾಣೆಯಲ್ಲಿ ಸೀಲು ಮಾಡಿರುತ್ತೇನೆ. ನಾನು ಪಂಚನಾಮೆ ಕಾಲಕ್ಕೆ ಸ್ಥಳದಲ್ಲಿ ಜಪ್ತಿ ಪಡಿಸಿಕೊಂಡಿಲ್ಲ. ನಾನು ಆರೋಪಿತನ ಅಂಗ ಶೋಧನೆ ಮಾಡಿಲ್ಲ. ಆರೋಪಿಯ ಬಳಿ ನಗದು ಹಣ ಸಿಕ್ಕಿಲ್ಲ. ನನಗೆ ಯಾರೋ ಕಡೆಯಿಂದ ಸಹ ಸೇಂದಿ ಕುಡಿದು ಜೀವಕ್ಕೆ ಅನಾರೋಗ್ಯವಾಗಿದೆ ಎಂದು ನನಗೆ ದೂರು ಸಲ್ಲಿಸಿಲ್ಲ. ನಾನು ನಿ ಪಿ 1 ಪಂಚನಾಮೆಯಲ್ಲಿ ಪಂಚನಾಮೆಯ ಅಂಶಗಳನ್ನು ಓದಿ ಹೇಳಿ ತಿಳಿದುಕೊಂಡು ಸಹಿ ಹಾಕಿರುತ್ತೇನೆ ಎಂದು ಬರೆದಿಲ್ಲ ಎಂದರೆ ಸರಿ.

ಹೀಗಿರುವಾಗ ನಾನು ದಿಃ 17-02-2016 ರಂದು ನಾನು ಬೆಳಿಗ್ಗೆ ಠಾಣೆಯಲ್ಲಿ ಹಾಜರಿದ್ದಾಗ ನನಗೆ ಚಾ ಸಾ 4 ಮತ್ತು 5 ರವರಿಗೆ ಗಸ್ತು ಕರ್ತವ್ಯಕ್ಕೆ ಬಜಾರ ಏರಿಯಾದಲ್ಲಿ ನೇಮಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ಸುಮಾರು 12-45 ಗಂಟೆಗೆ ಬಸವನಗರದಲ್ಲಿ ಅನಧಿಕೃತವಾಗಿ ಸೇಂದಿ ಮಾರಾಟ ಮಾರುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ನಾನು ಮತ್ತು ಪಂಚರಾದ ಚಾ ಸಾ 2 ಮತ್ತು 3 ರವರು ಹಾಗೂ ಸಿಬ್ಬಂದಿಯೊಂದಿಗೆ ಬಸವನಗರದ ಕಡೆಗೆ ಮೊಟಾರು ಸೈಕಲ್ ಮೇಲೆ ಹೋಗಿದ್ದು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಹಾಜಿ ಅಲಿ ದರ್ಗಾದ ಹತ್ತಿರ ನಿಂತು ನೋಡಲಾಗಿ ಒಬ್ಬ ವ್ಯಕ್ತಿ ಸೇಂದಿ ಪಾಕೇಟನ್ನು ಕೈಯಲ್ಲಿ ಹಿಡಿದು ರೂ.5/- ಒಂದು ಪಾಕೇಟು ಅಂತಾ ಸೇಂದಿ ಮಾರಾಟ ಮಾರುತ್ತಿದ್ದನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ನಾವು ಒಂದು ಗಂಟೆ ಸುಮಾರಿಗೆ ಆರೋಪಿಗೆ ಪರವಾನಗಿ ಬಗ್ಗೆ

ವಿಚಾರಿಸಿದಾಗ ಆರೋಪಿತನು ಯಾವುದೇ ಸಮರ್ಪಕವಾಗಿ ಉತ್ತರನೀಡಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಆತನ ಹೆಸರನ್ನು ಕೇಳಲಾಗಿ ಆರೋಪಿತನು ಆತನ ಹೆಸರು ರಾಮ ತಂದೆ ಕಿಶನ್ ಜಾದವ್ ಅಂತಾ ತಿಳಿಸಿರುತ್ತಾರೆ. ನಂತರ ಸೆಂದಿ ಮಾರಾಟ ಮಾಡುತ್ತಿದ್ದ ಒಂದು ವೈರಿನ ಬ್ಯಾಗನ್ನು ಬಿಚ್ಚಿ ನೋಡಲಾಗಿ ಒಟ್ಟು 30 ಪಾಕೇಟು ಸೆಂದಿ ಇತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸದರಿ ಸೇಂದಿ ಪಾಕೇಟುಗಳು ಹಾಗು ಆರೋಪಿಗೆ ನಮ್ಮ ತಾಬೆಗೆ ತೆಗೆದುಕೊಂಡು ಠಾಣೆಗೆ ತಂದು ಅದರಲ್ಲಿರುವ ಒಂದು ಸೇಂದಿ ಪಾಕೇಟನ್ನು ಗಾಜಿನ ಬಾಟಲಿಯಲ್ಲಿ ಎಸಿ ಡಿ ಎಂ ಮುಂದ್ರೆಯಿಂದ ಸೀಲು ಮಾಡಿದೇವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಮು ಮಾ ಹಾಗೂ ಆರೋಪಿತರಿಗೆ ಮುಂದಿನ ಕ್ರಮಕ್ಕಾಗಿ ಚಾ ಸಾ 7 ರವರಿಗೆ ಒಪ್ಪಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸಾಕ್ಷಿಗೆ ಒಂದು ಬಾಟಲಿಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ಈಗಾಗಲೆ ಮು ಮಾ 1 ಎಂದು ಗುರುತಿಸಲಾಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದೇ ರೀತಿ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತನು ಆ ದಿನ ಸೇಂದಿ ಮಾರಾಟ ಮಾಡುತ್ತಿದ್ದನು ಎಂದು ನುಡಿಯುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

ಪ್ರ. ದ. ನ್ಯಾ. ದಂ.
**ಸೇಡಂ.**